**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಶಾಂತಿನಗರ: ಬೆಂಗಳೂರು-27.**

**ಸಂಖ್ಯೆ : ಬೆಂ.ಮ.ಸಾ.ಸಂಸ್ಥೆ : ಕೇಕ : ಮುಸಂವ್ಯ: ಆ: ಸಾ: 18ಪಿ : 1920 : 2018-19 ದಿ : 15 .10.2019**

2521

25 NOV 2019

ನಿರ್ದೇಶಕರು
ವೈದ್ಯಕೀಯ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಅಂಬೇಡ್ಕರ್ ವೀದಿ,
ಸಂಪಗೀರಾಮನಗರ,
ಬೆಂಗಳೂರು – 01.

**ಮಾನ್ಯರೇ,**

**ವಿಷಯ:** ಮಾನ್ಯತೆ ಹೊಂದಿದ ಕಾಲೇಜುಗಳ ಪಟ್ಟಿಯನ್ನು ಒದಗಿಸುವ ಬಗ್ಗೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂ.ಮ.ಸಾ.ಸಂಸ್ಥೆಯು 2019-20ನೇ ಸಾಲಿನ ವಿದ್ಯಾರ್ಥಿ ಪಾಸುಗಳನ್ನು ಜೂನ್ ಮಾಹೆಯಿಂದ ವಿತರಿಸಲು ಕ್ರಮಕೈಗೊಂಡಿದ್ದು, ಪ್ರಸ್ತುತ ಸಾಲಿನ ವಿದ್ಯಾರ್ಥಿ ಪಾಸಿಗಾಗಿ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪಾಸು ಪಡೆಯಲು ಅವಕಾಶ ಕಲ್ಪಿಸಲಾಗಿತ್ತು.

ವಿದ್ಯಾರ್ಥಿ ಬಸ್ ಪಾಸುಗಳನ್ನು ಸಂಸ್ಥೆಯು ಪ್ರಮುಖ ಬಸ್ ನಿಲ್ದಾಣ/ಟಿಟಿಎಂಸಿ ಗಳಲ್ಲಿ ವಿತರಣೆ ಮಾಡಲು ಕ್ರಮಕೈಗೊಳ್ಳಲಾಗಿತ್ತು. ಇಲ್ಲಿಯವರೆಗೂ ಶೇ.90 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸುಗಳನ್ನು ಪಡೆದಿದ್ದಾರೆ. ಕೆಲವೊಂದು ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸಿದ್ದು, ಕಾಲೇಜಿನ ನೋಡಲ್ ಅಧಿಕಾರಿಗಳು ಸದರಿ ಅರ್ಜಿಗಳನ್ನು ಅನುಮೋದಿಸದೇ ಇರುವುದು ಕಂಡುಬಂದಿರುತ್ತದೆ.

ಆದ್ದರಿಂದ ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಸರಿಯಾಗಿದ್ದಲ್ಲಿ ಅನುಮೋದಿಸಲು ಎಲ್ಲಾ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ **ವಿದ್ಯಾರ್ಥಿ ಬಸ್ ಪಾಸುಗಳನ್ನು ಪಡೆಯದ ವಿದ್ಯಾರ್ಥಿಗಳು ವಿದ್ಯಾರ್ಥಿ ಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಿ, ಕೆಂ.ಬ.ನಿಲ್ದಾಣದಲ್ಲಿ (ಪ್ರಸ್ತುತ ಕೆಂ.ಬ.ನಿಲ್ದಾಣದಲ್ಲಿ ಮಾತ್ರ ಪಾಸು ವಿತರಣೆ ಮಾಡಲಾಗುತ್ತಿದೆ) ಪಾಸು ಪಡೆಯಬಹುದಾಗಿರುತ್ತದೆ** ಎಂಬ ವಿಷಯವನ್ನು ಪಾಸು ಪಡೆಯದ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರಲು ಕ್ರಮಕೈಗೊಳ್ಳುವಂತೆ ಈ ಮೂಲಕ ಕೋರಲಾಗಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

**ಮುಖ್ಯ ಸಂಚಾರ ವ್ಯವಸ್ಥಾಪಕರು(ಆ)**
**ಬೆಂ.ಮ.ಸಾ.ಸಂಸ್ಥೆ.**

To all the principals Affiliated Paramedical college Karnataka for necessary action.
6/12/19

4740
04 DEC 2019